ಮುಖ್ಯಮಂತ್ರಿಗಳಾದರೂ ಇರಬೇಕು. ಅಥವಾ ಉಪ ಮುಖ್ಯಮಂತ್ರಿಗಳಾದರೂ ಇರುಬೇಕು ಅಥವಾ ಇಡೀ ಸದನದ ಎಲ್ಲಾ ಮಂತ್ರಿಗಳಾದರೂ ಇರಬೇಕಾಗಿತ್ತು ಇಷ್ಟು ಬೇಜವಾಬ್ದಾರಿ, ಇಷ್ಟು ಅವಹೇಳನ ಇರಬಾರದು. ಇದು ಪ್ರಜಾತಂತ್ರ ವ್ಯವಸ್ಥೆಯ ಕೊಲೆ.

(ಗೊಂದಲ)

ಅಧ್ಯಕ್ಷರು : ಆಯಿತು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ, ತಾವು ದಯವಿಟ್ಟು ಸಭಾತ್ಯಾಗ ಮಾಡಿ.

ಶ್ರೀ ಎ.ಟಿ. ರಾಮಸ್ವಾಮಿ : ನಿಮ್ಮ ಮಾತನ್ನು ಒಪ್ಪುತ್ತಿದ್ದೇವೆ ಪಾಟೀಲರೇ;

ಶ್ರೀ ಎಸ್. ಎಸ್. ಪಾಟೀಲ್ : ಈ ಕಡೆ ಇದ್ದಾಗ ಅಲ್ಲಿ ಖಾಲಿ ಬೆಂಚ್ ಇದ್ದುದ್ದಕ್ಕೆ ಏನೇನು ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ವಿರೋಧಪಕ್ಷದ ನಾಯಕರು ಸಭಾತ್ಯಾಗ ಮಾಡಿ ಸಾರ್.

ಅಧ್ಯಕ್ಷರು: ಅದನ್ನೇ ತಾವ್ಯಾಕೆ ಮುಂದುವರೆಸಿಕೊಂಡು ಹೋಗುತ್ತೀರಿ? ಆಯಿತು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು. ನಡೆಯಿರಿ. ನಾವುಗಳೆಲ್ಲರೂ ಹೊರಗಡೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳಾದರೂ ಇರಬೇಕು. ಅಥವಾ ಉಪ ಮುಖ್ಯಮಂತ್ರಿಗಳಾದರೂ ಇರಬೇಕಾಗಿತ್ತು ಅದು ಬಜೆಟ್ ಮಂಡನೆ ಮಾಡುವಾಗ ಅವರು ಇರಲೇ ಬೇಕು ಎಲ್ಲಾ ಅಧಿಕಾರಿಗಳೂ ಇರಬೇಕಾಗಿತ್ತು ಮತ್ತು ಮುಖ್ಯ ಕಾರ್ಯದರ್ಶಿಗಳವರು ಕೂಡ ಇರಬೇಕು.

ಅಧ್ಯಕ್ಷರು : ಅವರಿಗೆ ಈಗಾಗಲೇ ಹೇಳಿಕಳುಹಿಸಿದ್ದೇನೆ. ತಾವು ಸದನದಲ್ಲಿ ಇರಬೇಕು ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ ವಾಟಾಳ್ ನಾಗರಾಜ್‌ರವರು ಹೇಳಿದರು ಎಂದು ಹೇಳಿ ತಾವು ದಯಮಾಡಿ ಹೋಗಬಾರದು ದಯಮಾಡಿ ಕುಳಿತುಕೊಳ್ಳಿ ಅವರುಗಳು ಬರುತ್ತಾರೆ. ತಾವು ಮಾತನಾಡಿ ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇತರ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈ ತರಹ ಎಷ್ಟೋ ಪ್ರಕರಣಗಳಲ್ಲಿ ಈ ರೀತಿ ಆಗಿದೆ. ತಾವುಗಳು ಈ ರೀತಿ ಮಾಡುವುದು ಸರಿಯಲ್ಲ ತಾವು ವಿರೋಧ ಪಕ್ಷದ ನಾಯಕರಾಗಿ ಈ ರೀತಿ ಹೋಗುವುದು ಸರಿಯಲ್ಲ. ನೀವು ಮಾಜಿ ಮುಖ್ಯಮಂತ್ರಿಗಳು ಈ ರೀತಿ ಹೋಗುವುದು ಸರಿಯಲ್ಲ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಿಮಗೂ ಕೂಡ ಇದು ಅವಮಾನ. ತಾವೂ ಕೂಡ ಎದ್ದು ಬರಬೇಕು.

ಅಧ್ಯಕ್ಷರು : ತಾವುಗಳು ಕುಳಿತುಕೊಳ್ಳಿ. ಅವರುಗಳು ಬರುತ್ತಾರೆ,

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರನ್ನು ಕರೆಸಿ. ಅರ್ಥ ಮಂತ್ರಿಗಳು ಇರಬೇಕಾಗಿತ್ತು. Taha too ಲೀಡರ್ ಆಫ್ ಅಪೋಜಿಷನ್ ಮಾತನಾಡುವಾಗ ಅವರು ಇರಬೇಕು. ಈಗ ಹತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡುತ್ತಿದ್ದೇನೆ. ಅರ್ಥಮಂತ್ರಿಗಳು ಎಲ್ಲರನ್ನೂ ಕರೆಸಿ. ಬೇರೆ ಸಮಯವಾದರೆ ಅದೊಂದು ತರಹ ಅದರಲ್ಲೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳು ಇರಬೇಕು.

(ಸದನವು 3-24 ಗಂಟೆಗೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4-57ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 57 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 22ನೇ ಮಾರ್ಚ್ 2006ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-II

(1) (123) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಿಜಾಪುರ ನಗರದಲ್ಲಿರುವ ಆರಕ್ಷಕ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು?